# ಜಾತಿಧರ್ಮಗಳಾಚೆ: ಕಲ್ಲರಳಿಹೂವಾಗಿ

**ಡಾ.ಹೆಚ್.ಮಲ್ಲಿಕಾರ್ಜುನ**
**ಮುಖ್ಯಸ್ಥರು**
**ಕನ್ನಡ ಅಧ್ಯಯನ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮೋಕ.**

ಅಧುನಿಕ ಕನ್ನಡ ಕಾದಂಬರಿಗಳಲ್ಲಿ ಮದಕರಿನಾಯಕ ಮತ್ತು ಮೈಸೂರು ಸಂಸ್ಥಾನದ ನವಾಬ ಹೈದರಾಲಿ ಕಾಲದ ಐತಿಹಾಸಿಕ ಘಟನೆಗಳಿಗೆ ಕಾಲ್ಪನಿಕ ಅಂಶಗಳನ್ನು ಹೆಣೆದು ಬಿ.ಎಲ್.ವೇಣು ಅವರು ಕಲ್ಲರಳಿಹೂವಾಗಿ ಎಂಬ ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ. ಇದು ಜಾತ್ಯಾತೀತ ಮಾನವೀಯ ಮೌಲ್ಯಗಳನ್ನು ಗೌರವಿಸುವ ಹಾಗೂ ಇವುಗಳ ಸುಳಿಯಲ್ಲಿ ಪುಟಿದೇಳುವ ಪ್ರೀತಿಯನ್ನು ಪೋಷಿಸುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಕಾದಂಬರಿಯು ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಭಾರತದ ಸಾಹಿತ್ಯದಲ್ಲಿ ಪಾದರ್ಪಣೆ ಮಾಡಿತು. ಬಂಗಾಲಿ, ಮರಾಠಿ ಭಾಷೆಗಳಿಗೆ ಮೊದಲು ಪ್ರವೇಶಗೊಂಡು ನಂತರ ಕನ್ನಡದಲ್ಲಿ ಕಾಣಿಸಿಕೊಳ್ಳುತ್ತದೆ. ಕಾದಂಬರಿ ಪ್ರಕಾರವು ಆಧುನಿಕ ಸಾಹಿತ್ಯ ಪ್ರಕಾರವಾಗಿದ್ದರೂ ಅದು ಹುಟ್ಟುವುದಕ್ಕಿಂತ ಮೊದಲು ಕನ್ನಡದಲ್ಲಿ ಗದ್ಯ ಪ್ರಕಾರವೊಂದು ಬೆಳೆದುಬಂದಿದೆ. ತಿರುಮಲಾರ್ಯನ 'ಚಿಕ್ಕದೇವರಾಜ ಭಿನ್ನಪ' ಮುದ್ದಣ್ಣನ 'ರಾಮೇಶ್ವಮೇಧ', 'ಗೋದಾವರಿ', ಕೆಂಪು ನಾರಾಯಣನ ಮುದ್ರಾಮಂಜೂಷದಲ್ಲಿಯ ಕಥನ ರೀತಿ ಕಾದಂಬರಿಗೆ ಹೆಚ್ಚು ಹತ್ತಿರವಾಗಿದೆಯನ್ನಬೇಕು. ಪಾಶ್ಚಾತ್ಯ ಸಾಹಿತ್ಯದ ಪ್ರಭಾವಕ್ಕೆ ಒಳಗಾಗದ ಪೂರ್ವದಲ್ಲಿ ಶಿಷ್ಟಸಾಹಿತ್ಯದ ಮಾದರಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಎಂದು ಗುರುತಿಸಬಹುದಾದ ಕೃತಿಗಳೆಂದರೆ ಯಾದವನ ಕಲಾವತಿ ಪರಿಣಯ, ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾ ಪರಿಣಯ, ಕೆಂಪು ನಾರಾಯಣನ ಮುದ್ರಾಮಂಜೂಷಗಳು ಪ್ರಧಾನವಾಗಿವೆ. ಕಾದಂಬರಿಯ ವಸ್ತುವನ್ನಾಧರಿಸಿ ಅವುಗಳನ್ನು ಐತಿಹಾಸಿಕ, ಪೌರಾಣಿಕ, ಪತ್ತೇದಾರಿ, ಸಾಮಾಜಿಕ, ಪ್ರಾದೇಶಿಕ ಕಾದಂಬರಿಗಳು ಎಂದು ವಿಭಾಗಿಸಿಕೊಳ್ಳಬಹುದು.

ಬಿ.ಎಲ್.ವೇಣು ಅವರು ಐದು ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ವೇಣು ಅವರಿಗಿಂತ ಮೊದಲು ಕನ್ನಡದಲ್ಲಿ ಅನೇಕ ಐತಿಹಾಸಿಕ ಕಾದಂಬರಿಗಳು ಬಂದಿವೆ. ಗಳಗನಾಥ, ದೇವುಡು, ಆನಂದಕಂದ, ಅನಕೃ, ತರಾಸು, ನಿರಂಜನ ಮೊದಲಾದವರು ಐತಿಹಾಸಿಕ ಕಾದಂಬರಿಗಳನ್ನು ಬರೆದವರಲ್ಲಿ ಪ್ರಮುಖರಾಗಿರುವರು. ಈ ಸಾಲಿನಲ್ಲಿ ಬಿ.ಎಲ್.ವೇಣು ಅವರು ಒಬ್ಬರಾಗಿದ್ದಾರೆ. ಇವರು ಚಿತ್ರದುರ್ಗದ ಇತಿಹಾಸವನ್ನು ಕುರಿತು ಕಲ್ಲರಳಿ ಹೊವಾಗಿ ಎಂಬ ಐತಿಹಾಸಿಕ ಕಾದಂಬರಿಯನ್ನು ರಚಿಸಿದ್ದಾರೆ. ಯುವಕ ವೀರಣ್ಣ ಮೂಲತಃ ವೀರಶೈವ ಮತದವನಾಗಿದ್ದು ಮುಸ್ಲೀಂ ಯುವತಿಯಾದ ಹಸೀನಾಳ ಪ್ರೇಮದ ಬಲೆಯಲ್ಲಿ ಸಿಲುಕಿ ಭವಿಷ್ಯದ ಹಂದರ ಹೆಣೆಯುತ್ತಾ ಹೋಗುತ್ತಾನೆ. ಆದರೆ ಅದು ಹಸನುಗೊಳ್ಳುವ ಮೊದಲೇ ಗಡಿಕಾಗಳದಲ್ಲಿ ಹೋರಾಡುತ್ತಾ ವೀರ ಮರಣವನ್ನು ಹೊಂದುತ್ತಾನೆ. ಹಸೀನ ಮತ್ತು ವೀರಣ್ಣರವರ ಪೇಮ ಯುದ್ಧ ಭೂಮಿಯಲ್ಲಿ ಆರಂಭವಾಗಿ ಯುದ್ಧ ಭೂಮಿಯಲ್ಲಿ ಅಂತ್ಯವಾಗುತ್ತದೆ. ವೀರಣ್ಣನ ತಂದೆ ಬಸಯ್ಯ ರಾಜ ವೈದ್ಯನಾಗಿದ್ದನು. ವೀರಣ್ಣ ದೊರೆತನಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಕೊಡುವ ಮತ್ತು ತರುವ ವೃತ್ತಿಯನ್ನು ನಿರ್ವಹಿಸುತ್ತಿದ್ದ. ನಂತರ ಮದಕರಿ ನಾಯಕನ ಸೇನೆಯ ಮುಖ್ಯಸ್ಥನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಹೈದರಾಲಿ ಮತ್ತು ಮದಕರಿನಾಯಕನ ಸೇನೆಯ ಮಧ್ಯೆ ನಡೆದ ಕಾಳಗದಲ್ಲಿ ಹೈದರಾಲಿ ಪಡೆಯ ದಳಪತಿ ಕುತ್ಬುದ್ದೀನ್ ಮತ್ತು ಅವನ ಪರಿವಾರದವರು ಹತ್ಯೆಗೊಳಗಾಗುತ್ತಾರೆ. ಆ ಸಮಯದಲ್ಲಿ ಕುತ್ಬುದ್ದೀನ್‌ನ ಮಗಳು ಹಸೀನ ಶತ್ರು ಸೈನ್ಯದ ಕೈಯಲ್ಲಿ ಅರ್ಧ ಜೀವವನ್ನು ಕಳೆದುಕೊಂಡಿರುತ್ತಾಳೆ. ಅರೆ ಜೀವ ಹಿಡಿದು ನರುಳುವ ನಾರಿಯ ಆ ಧ್ವನಿಯ ಜಾಡನ್ನು ಹಿಡಿದು ಹೊರಟ ವೀರಣ್ಣನಿಗೆ ತನ್ನ ಜೀವನದುದ್ದಕ್ಕೂ ತನ್ನನ್ನೇ ಸಮರ್ಪಿಸಿಕೊಳ್ಳಲು ಅನುವಾಗುತ್ತಾನೆ.

ಆಚರಣೆ, ಉಡುಗೆ, ತೊಡುಗೆ ಭಾಷೆಗಳು ಬೇರೆಯಾದರೂ ಯುವತಿಯ ಪ್ರೇಮ ಬಲೆಯಲ್ಲಿ ಸಿಲುಕಿದ ವೀರಣ್ಣ ಒಂದೆಡೆಯಾದರೆ, ಅನ್ಯ ಭಾಷೆ, ಅನ್ಯಧರ್ಮ ಹಾಗೂ ತಮಗಿಂತ ತೀರಾ ಕೆಳಜಾತಿಯವಳೆಂದು ತೊಳಲಾಡುವ ಈರಮ್ಮ ಮತ್ತೊಂದು ಮುಖವಾಗಿ ಕಾಣಿಸಿಕೊಳ್ಳುತ್ತಾಳೆ. ಈ ಎರಡೂ ಪಾತ್ರಗಳಿಗಿಂತ ಭಿನ್ನವಾದ ಪಾತ್ರ ಬಸಯ್ಯನದು. ಇವನು ಮಾನವೀಯತೆಗೆ ಒತ್ತು ಕೊಡುವುದರ ಮೂಲಕ ಸಮಭಾವದಲ್ಲಿ ಕಾಣುತ್ತಾನೆ. ಎರಡು ಆಯಾಮಗಳಲ್ಲಿ ಈ ಕಾದಂಬರಿಯು ಹಂದರಗೊಂಡಿದೆ. ಒಂದು ಚಿತ್ರದುರ್ಗದ ಪಾಳೆಗಾರ ಮದಕರಿ ನಾಯಕ ಮತು ್ತ ಮೈಸೂರು ಸಂಸ್ಥಾನದ ನವಾಬ ಹೈದರಾಲಿ ಅವರ ಮಧ್ಯೆ ನಡೆಯುವ ಗಡಿ

ಕಾಳಗಗಳ ಸನ್ನಿವೇಶಗಳು. ಎರಡು ಭಿನ್ನ ಮತಕ್ಕೆ ಸೇರಿದ ಹಸೀನ ಮತ್ತು ವೀರಣ್ಣ ಅವರ ಪ್ರೀತಿ. ಕಾದಂಬರಿಕಾರರು ಎರಡನೇ ಆಯಾಮಕ್ಕೆ ಹೆಚ್ಚು ಒತ್ತು ಕೊಟ್ಟಿರುವುದು ಸ್ಪಷ್ಟವಾಗುತ್ತದೆ. ರಾಜ್ಯದ ಎಲ್ಲಾ ಪಾಳೆಗಾರರನ್ನು ಮಣಿಸಿ ತನ್ನ ಖಜಾನೆಯನ್ನು ತುಂಬಿಸುತ್ತಿದ್ದ ಧನದಾಹಿ ಹೈದರಾಲಿ ನೆಲದಾಹಿಯೂ ಆಗಿದ್ದನು. ಹಾಗಾಗಿ ಮದಕರಿನಾಯಕನು ತನ್ನ ಕೈಮುಷ್ಠಿಯಲ್ಲಿ ಇಟ್ಟುಕೊಳ್ಳಬೇಕೆಂದು ಹಂಬಲಿಸುತ್ತಿದ್ದನು. ದುರ್ಗದ ಕೋಟೆಯೊಂದು ವಶವಾದರೆ ಮೈಸೂರು ಸಂಸ್ಥಾನದಲ್ಲಿ ತನ್ನನ್ನು ಪ್ರಶ್ನಿಸುವವರು ಇಲ್ಲದಂತಾಗುತ್ತದೆ ಎಂಬ ಉದ್ದೇಶದಿಂದ ಆಗಾಗ ಗಡಿ ಪ್ರದೇಶದಲ್ಲಿ ತನ್ನ ಸೇನೆಯನ್ನು ನೇಮಿಸಿ ದುರ್ಗದ ನಾಯಕನನ್ನು ಕೆಣಕುತ್ತಿದ್ದನು. ಇಂಥಹ ವಾತಾವರಣದಲ್ಲಿದ್ದಾಗ ಒಂದು ದಿನ ವೀರಣ್ಣ ನಾಯಕನ ಹಟ್ಟಿಯ ಪಾಳೆಗಾರನಿಗೆ ಪತ್ರವನ್ನು ತಲುಪಿಸಿ ದುರ್ಗಕ್ಕೆ ಹಿಂದಿರುಗುವ. ಆ ಹೊತ್ತಿಗೆ ದುರ್ಗದ ಸೇನೆಗೂ ಮತ್ತು ಹೈದರಾಲಿಯ ಸೇನೆಗೂ ಗಡಿ ಕಾಳಗ ನಡೆದಿರುತ್ತದೆ. ಆ ಕಾಳಗದಲ್ಲಿ ಅನೇಕ ಸೈನಿಕರು ವೀರ ಮರಣ ಹೊಂದಿರುತ್ತಾರೆ.

ಯುದ್ಧ ಭೂಮಿಯಲ್ಲಿ ಸತ್ತು ಬಿದ್ದಿದ್ದ ಸೈನಿಕರನ್ನು ನೋಡಿ ವೀರಣ್ಣನ ಜೀವ ತಲ್ಲಣಿಸುತ್ತದೆ. ದೊರೆಗಳ ವೈರತ್ವವನ್ನು ಕುರಿತು ಈ ರೀತಿಯಾಗಿ ಯೋಚಿಸುತ್ತಾನೆ "ಎಂದಾದರೂ ಒಂದು ದಿನ ಗಳಿಸಿದ್ದನ್ನೆಲ್ಲಾ ಇಲ್ಲೇ ಬಿಟ್ಟು ಬಂದ ಬರಿಗೈಯಲ್ಲೇ ಹೋಗಬೇಕಾದ ದೊರೆಗಳಲ್ಲಿ ಯಾಕಿಷ್ಟು ದಾಹ ಮತ್ಸರ? ದೊರೆಗಳ ಪ್ರತಿಷ್ಠೆ, ಪೊಗರು, ಪೈಪೋಟಿ, ವೈರಗಳನ್ನು ತಣಿಸಲು ಅದೆಷ್ಟು ಅಮಾಯಕರ ಬಲಿ. ಸೈನಿಕರ ಸಾವು ಅವರುಗಳ ಸಾವಷ್ಟೇ ಅಲ್ಲ. ಅವರ ಸಂಸಾರದ ಸುಖದ ಕೊಲೆಯೂ ಅಲ್ಲವೇ? ರಾಜನ ಶತ್ರುಗಳು ಸೈನಿಕರಿಗೂ ಶತ್ರುಗಳು ಇದೆಂತಹಾ ಚೋದ್ಯ?" (ಕಲ್ಲರಳಿ ಹೂವಾಗಿ, ಬಿ.ಎಲ್.ವೇಣು, ಪು. ೧೩, ೨೦೦೯) ಈ ರೀತಿಯಾಗಿ ವೀರಣ್ಣ ಸತ್ತವರ ಬಗ್ಗೆ ಮತ್ತು ಅವರ ಸಂಸಾರಗಳ ಸ್ಥಿತಿಗತಿಗಳ ಬಗ್ಗೆ ಮರುಗುತ್ತಾನೆ ಹಾಗೂ ಯುದ್ಧ ಮಾಡದೆ ಬದುಕಲು ಸಾಧ್ಯವಿಲ್ಲವೇ ಎಂದು ಯೋಚಿಸುತ್ತಾನೆ. ಸತ್ತ ಶವಗಳ ನಡುವೆ ನರಳುವ ಧ್ವನಿಯೊಂದು ಕೇಳಿಬರುತ್ತದೆ. ಈ ಧ್ವನಿಯು ಈ ಯೋಚನೆಯಿಂದ ಹೊರಬರುವಂತೆ ಮಾಡಿತು. ನರಳುವ ಧ್ವನಿಯನ್ನು ಹಿಂಬಾಲಿಸಿ ಹೋಗುತ್ತಾನೆ. ಅಲ್ಲಿ ಯುವತಿ ಚೂರಿ ಇರಿತದಿಂದ ಸಾವು ಬದುಕಿನ ಹೊಸ್ತಿಲಲ್ಲಿ ನರಳುತ್ತಿರುವುದು ಕಂಡುಬರುತ್ತದೆ. ಶತ್ರು ಪಾಳೆಯದವಳೆನ್ನುವ ಅಳುಕನ್ನು ಬದಿಗೊತ್ತಿ ಆಕೆಯನ್ನು ಕಾಪಾಡುವುದು ಮಾನವ ಧರ್ಮವೆಂದರಿತು, ಆಕೆಯನ್ನು ಮನೆಗೆ ತರುತ್ತಾನೆ. ರಾಜ ವೈದ್ಯನಾದ ಬಸಯ್ಯ ಗಾಯಗೊಂಡ ಯುವತಿಯನ್ನು ಉಪಚರಿಸುವುದು ತನ್ನ ವೃತ್ತಿ ಧರ್ಮವೆಂದು ತಿಳಿದು ಆಕೆಗೆ ಔಷದೋಪಚಾರ ಮಾಡುತ್ತಾನೆ. ಹೀಗೆ ತಂದೆ ಮಗ ಶತ್ರುಪಾಳೆಯದವಳೆಂಬುವುದನ್ನು ಬದಿಗೊತಿ_ ಯುವತಿಯನ್ನು ಪ್ರಾಣಾಪಯಾಯದಿಂದ ಪಾರು ಮಾಡುತ್ತಾರೆ. ಹೀಗೆ ಪಾರು ಮಾಡುವುದರ ಮೂಲಕ ಮಾನವೀಯತೆಯನ್ನು ಮೆರೆಯುತ್ತಾರೆ. ಶತ್ರು ಪಾಳೆಯದ ಯುವತಿಯನ್ನು ಮನೆಗೆ ಕರೆತಂದು ಔಷಧೋಪಚಾರ ಮಾಡಿದ್ದು ರಾಜ ವಿರೋಧಿ ಕಾರ್ಯ ಮಾಡಿದವೆಂಬ ಭಯ ವೀರಣ್ಣ ಮತ್ತು ಅವನ ಕುಟುಂಬದವರನ್ನು ಕಾಡುತ್ತದೆ. ಆದರೆ ಆ ಯುವತಿಯನ್ನು ಕಾಪಾಡಿದ ಸಮಾಧಾನದಿಂದ ಈ ಭಯ ಅವರಿಗೆ ಗೌಣವೆನಿಸುತ್ತದೆ.

ವಯಸ್ಸಿನ ಅಪೇಕ್ಷೆಯಂತೆ ಸಹಜವಾಗಿಯೇ ವೀರಣ್ಣ ಹಸೀನಾಳನ್ನು ಪ್ರೀತಿಸುವುದರ ಮೂಲಕ ಮತ್ತೊಂದು ಅಪಾಯಕಾರಿಯಾದ ಹೆಜ್ಜೆಯನ್ನು ಇಡುತ್ತಾನೆ. ಹಸೀನ ಮೊದಮೊದಲು ವೀರಣ್ಣನ ಪ್ರೀತಿಗೆ ಮಣಿಯುವುದಿಲ್ಲ. ಅವನನ್ನು ಶತ್ರು ಎಂಬಂತೆ ಭಾವಿಸುತ್ತಾಳೆ. ಗಡಿಕಾಳಗದಲ್ಲಿ ತನ್ನ ತಂದೆ-ತಾಯಿ ಮತ್ತು ತನ್ನವರು ಹತರಾಗಲು ಇವನು ಕಾರಣವೆಂದು ಭಾವಿಸುತ್ತಾ ವೀರಣ್ಣನನ್ನು ಚೂರಿಯಿಂದ ಇರಿಯುವುದಕ್ಕೆ ಮುಂದಾಗುತ್ತಾಳೆ. ತದನಂತರ ವೀರಣ್ಣನ ತಂದೆ ಬಸಯ್ಯ ಬಂದು ವಾಸ್ತವ ಸ್ಥಿತಿ ತಿಳಿ ಹೇಳಿದಾಗ ಹಸೀನಾಳಿಗೆ ಮನವರಿಕೆಯಾಗುತ್ತದೆ. ಆದರೂ ಅವಳು ವೀರಣ್ಣನ ಪ್ರೀತಿಗೆ ಸೋಲುವುದಿಲ್ಲ. ತನ್ನ ಜಾತಿ, ಧರ್ಮ, ಬಾಷೆ, ಆಚರಣೆ, ಸಂಸ್ಕೃತಿ ಎಲ್ಲವೂ ಅವಳನ್ನು ಬಂಧಿಸುತ್ತದೆ. ಆದರೆ ಕೊನೆ ಕೊನೆಗೆ ಈ ಬಂಧನಗಳು ಕಳಚಿಕೊಂಡು ವೀರಣ್ಣನ ನಿರ್ಮಲ ಮನಸ್ಸಿನ ಪ್ರೀತಿಯನ್ನು ಒಪ್ಪಿಕೊಳ್ಳುತ್ತಾಳೆ. ಕಲ್ಲಿನಂತಹ ಇವಳ ಹೃದಯ ಅರಳಿ ಹೂವಾಗುತ್ತದೆ. ವೀರಣ್ಣನ ಪ್ರೀತಿಯ ಮುಖೇನ ಧರ್ಮ ಸಾಮರಸ್ಯಕ್ಕೆ ಮತ್ತು ಮಾನವೀಯತೆಗಾಗಿ ಜನ್ಮಕೊಟ್ಟ ತಾಯಿಯನ್ನು ಲೆಕ್ಕಿಸದೇ ಪ್ರತಿಭಟಿಸುತ್ತಾನೆ. ಪ್ರೀತಿ ಮತ್ತು ಧರ್ಮ ಮನಷ್ಯ ಸಂಬಂಧಗಳನ್ನು ಬೆಸೆಯುವ ಪ್ರದಾನ ಮೌಲ್ಯಗಳು. ಧರ್ಮದೊಳಗೆ ಪ್ರೀತಿ ಅಡಗಿರುತ್ತದೆ. ಮುಸ್ಲಿಂ ಹುಡುಗಿ ರತ್ನಳಾಗಿದ್ದು, ಹಿಂದು ಸಂಪ್ರದಾಯದಂತೆ ಹಣೆಗೆ ಕುಂಕುಮ ಇಡುವುದು, ದೇಸಸ್ಥಾನಕ್ಕೆ ಹೋದಾಗ ತೀರ್ಥ ಮತ್ತು ಮಂಗಳಾರತಿ ತೆಗೆದುಕೊಳ್ಳುವುದು ಹೀಗೆ ಹಸೀನಾ ಹಿಂದು ಸಂಪ್ರದಾಯಗಳಿಗೆ ಹೊಂದಾಣಿಕೆ ಮಾಡಿಕೊಂಡರೆ. ವೀರಶೈವ ಧರ್ಮಕ್ಕೆ ಸೇರಿದ ವೀರಣ್ಣ ಹಸೀನಾಳ ಪ್ರೀತಿಗಾಗಿ ಮಾಂಸಾಹಾರವನ್ನು ತಿನ್ನಲು ಕಲಿತ್ತದ್ದು ಮತ್ತು ನಮಾಜ್ ಮಾಡುವುದನ್ನು ಕಲಿತ್ತದ್ದು. ಹೀಗೆ ವೀರಣ್ಣ ಮತ್ತು ಹಸೀನಾ ತಮ್ಮ ಪ್ರೀತಿಗೋಸ್ಕರ ತಮ್ಮ ಧರ್ಮದ ಸಂಪ್ರದಾಯಗಳನ್ನು ಮೀರಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಾರೆ. ಪ್ರೀತಿ ಮನುಷ್ಯ ಸಂಬಂಧಗಳನ್ನು ಬೆಸೆಯುವ ಪ್ರದಾನ ಮೌಲ್ಯಗಳಾಗುತ್ತವೆ ಎನ್ನುವುದಕ್ಕೆ ಇವರುಗಳ ಪ್ರೀತಿಯೇ ಸಾಕ್ಷಿಯಾಗುತ್ತದೆ.

ಈ ಕಾದಂಬರಿಯ ಕೊನೆಯಲ್ಲಿ ಮದಕರಿನಾಯಕನ ಸೈನಕ್ಕೂ ಮತ್ತು ಹೈದರಾಲಿಯ ಸೈನಕ್ಕೂ ಗಡಿಕಾಳಗ ನಡೆಯುತ್ತದೆ. ದುರ್ಗದ ಸೇನೆಯ ಮುಂದಾಳತ್ವವನ್ನು ವೀರಣ್ಣ ವಹಿಸಿಕೊಂಡಿರುತ್ತಾನೆ. ಹೈದರಾಲಿಯ ಸೇನೆಯ ಮುಂದಾಳತ್ವವನ್ನು ಹಸೀನಾಳ ಅಣ್ಣಂದಿರು ವಹಿಸಿಕೊಂಡಿರುತ್ತಾರೆ. ಈ ಕಾಳಗದಲ್ಲಿ ವೀರಣ್ಣ ವೀರ ಮರಣವನ್ನು ಹೊಂದುತ್ತಾನೆ. ಅವನ ಜೊತೆಯಲ್ಲಿ ಹಸೀನಾಳು ಕೂಡ ಸಾವನ್ನು ಅಪ್ಪುತ್ತಾಳೆ. ಶತಮಾನಗಳಿಂದಲೂ ಈ ಭೂಮಿಯ ಮೇಲೆ ಮನುಷ್ಯನ ದುರಾಸೆಯಿಂದ ದ್ವೇಷ ಅಸೂಯೆಗಳಿಂದ, ಅಧಿಕಾರದ ಆಸೆಯಿಂದ, ಕಾಳಗ, ಆಕ್ರಮಣ, ಯುದ್ಧಗಳು ನಡೆಯುತ್ತಲೇ ಬಂದಿವೆ. ಇದೇ ಭೂಮಿ ಮೇಲೆ ಜಾತಿ, ಮತ, ಧರ್ಮ, ದೇಶ, ಭಾಷೆ, ಪ್ರಭುತ್ವ ಎಲ್ಲವನ್ನೂ ಮೀರಿ ಪ್ರೀತಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಪ್ರೀತಿಯ ಮುಂದೆ ಎಲ್ಲವೂ ಗೌಣವಾಗುವುದನ್ನು ಈ ಕಾದಂಬರಿಯೂ ಸಹಾ ಸಾಬೀತು ಪಡಿಸುತ್ತದೆ.

**ಪರಾಮರ್ಶನ ಗ್ರಂಥಗಳು**

೧. ಕಲ್ಲರಳಿ ಹೂವಾಗಿ, ಬಿ.ಎಲ್.ವೇಣು, ೨೦೦೯

೨. ಕನ್ನಡ ಸಾಹಿತ್ಯ ಚರಿತ್ರೆ, ರಂ.ಶ್ರೀ.ಮುಗಳಿ